(39)

107

ಕರ್ನಾಟಕ ಸರ್ಕಾರ

ಸಂಖ್ಯೆ: ಕಂಇ.28.ಎಂಆರ್‌ಆರ್.2002

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು,ದಿನಾಂಕ: 15.07.2003.

ಸುತ್ತೋಲೆ

ವಿಷಯ: ಬಳಕೆದಾರರ ಶುಲ್ಕಗಳಿಂದ ವಿದ್ಯುತ್ ಬಿಲ್ಲುಗಳನ್ನು ಪಾವತಿಸುವ ಬಗ್ಗೆ.

ವಿಭಾಗಾಧಿಕಾರಿಗಳು ಬಿಡುಗಡೆ ಮಾಡುವ ನಿರ್ವಹಣಾ ವೆಚ್ಚದಲ್ಲಿ ಎಲ್ಲಾ ಭೂಮಿ ಕೇಂದ್ರಗಳಿಗೂ ಪ್ರತ್ಯೇಕ ವಿದ್ಯುತ್ ಮೀಟರ್ ಗಳನ್ನು ಒದಗಿಸುವಂತೆ ಸುತ್ತೋಲೆ ಸಂಖ್ಯೆ: ಕಂಇ 3 ಎಂಆರ್‌ಆರ್ 2003 ದಿನಾಂಕ 17.1.2003 ರಲ್ಲಿ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ. ಲಭ್ಯವಿರುವ ವರದಿಗಳ ಪ್ರಕಾರ ಬಹಳಷ್ಟು ತಾಲೂಕುಗಳು ಈಗ ಪ್ರತ್ಯೇಕ ಮೀಟರ್ ಗಳನ್ನು ಹೊಂದಿವೆ. ಸಂಗ್ರಹಿಸಲಾಗಿರುವ ಬಳಕೆದಾರರ ಶುಲ್ಕದಿಂದ ವಿದ್ಯುತ್ ವೆಚ್ಚವನ್ನು ಪಾವತಿಸಲು ಈಗ ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಲಾಗಿದೆ. ಆದಾಗ್ಯೂ, ಪ್ರತ್ಯೇಕ ಮೀಟರ್ ಅಳವಡಿಸಿರುವಂತಹ ತಾಲೂಕುಗಳಲ್ಲಿ ಮಾತ್ರ ಬಳಕೆದಾರರ ಶುಲ್ಕದಿಂದ ಪಾವತಿ ಮಾಡಬಹುದಾಗಿದೆ. ಪ್ರತ್ಯೇಕ ಮೀಟರ್ ಅಳವಡಿಸದೇ ಇರುವಂತಹ ತಾಲೂಕುಗಳಲ್ಲಿ ಬಳಕೆದಾರರ ಶುಲ್ಕದಿಂದ ವಿದ್ಯುತ್ ವೆಚ್ಚವನ್ನು ಪಾವತಿಸಿದಲ್ಲಿ ಅದಕ್ಕೆ ಜಿಲ್ಲಾಧಿಕಾರಿಗಳನ್ನೇ ವೈಯಕ್ತಿಕವಾಗಿ ಹೊಣೆ ಮಾಡಲಾಗುವುದು.

ಈ ಸುತ್ತೋಲೆಯು ಕಂದಾಯ ಇಲಾಖೆ ಇಂಟರ್ ನೆಟ್ ಸೈಟ್ http://www.revdept.kar.nic.in ನಲ್ಲೂ ಲಭ್ಯವಿದೆ.

15/7

(ರಾಜೀವ್ ಚಾವ್ಲಾ)
ಸರ್ಕಾರದ ವಿಶೇಷ ಕಾರ್ಯದರ್ಶಿ (ಭೂಮಿ)
ಕಂದಾಯ ಇಲಾಖೆ

ನಂ ಆರ್‌ಆರ್‌ಬಿ (2) 557/03-04

ಎಲ್ಲಾ ಜಿಲ್ಲಾಧಿಕಾರಿಗಳು

ನಂ. ಆರ್. ಆರ್ ಬಿ 85/03-04

ಎಲ್ಲಾ ತ್ರಾ.ಗಳಿಗೆ
ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.

ತಹಶೀಲ್ದಾರ್
ಚನ್ನರಾಯಪಟ್ಟಣ ತಾಲ್ಲೂಕು

31/7

4309